ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ಕೊಡಗು ಜಿಲ್ಲೆಯಲ್ಲಿ ನೆರೆ ಸಂತಸ್ತ್ರರಿಗೆ ವಸತಿ ಸೌಲಭ್ಯ ಕಲ್ಪಿಸದೇ ಇರುವ ಕುರಿತು

ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದಚುನಾಯಿತರಾದವರು):-

383 (412) ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಸುರಿದ ಧಾರಾಕಾರ ಮಳೆ ಹಾಗೂ ಭೂಕುಸಿತದಿಂದಾಗಿ ಸಾವಿರಾರು ಮನೆಗಳು ಹಾನಿಗೀಡಾಗಿ ಅನೇಕ ಕುಟುಂಬಗಳು ಇಂದಿಗೂ ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದುವರೆಗೂ ಎಷ್ಟು ಕುಟುಂಬಗಳಿಗೆ ಪುನರ್ ವಸತಿ ಸೌಲಭ್ಯ ಕಲ್ಪಿಸಲಾಗಿದೆ ; ಇನ್ನೂ ಎಷ್ಟು ಕುಟುಂಬಗಳು ಪುನರ್ ವಸತಿ ಸೌಲಭ್ಯದಿಂದ ಇಂದಿಗೂ ವಂಚಿತವಾಗಿವೆ; (ವರ್ಷವಾರು ಮಾಹಿತಿ ನೀಡುವುದು)

(ಇ) ಮನೆ ಕಳೆದುಕೊಂಡು ಇದುವರೆಗೂ ಸರ್ಕಾರದಿಂದ ಪುನರ್ ವಸತಿ ಸೌಲಭ್ಯ ದೊರಕದ ಕುಟುಂಬಗಳಿಗೆ ಯಾವ ಕಾಲಮಿತಿಯೊಳಗೆ ಮನೆ ನಿರ್ಮಿಸಿಕೊಡಲಾಗುವುದು ; ಈ ಸಂಬಂಧ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು ; ವಿನಿಯೋಗಿಸುತ್ತಿರುವ ಅನುದಾನವೆಷ್ಟು?